

ನಿಖರತೆಯನ್ನು ಸಾಧಿಸುವುದು ಕಡುಕಷ್ಟಸಾಧ್ಯ.

ಬ್ರೇಕ್ ಅಸಿಸ್ಟ್: ಈಗಿನ ಎಲ್ಲಾ ಕಾರ್‌ಗಳಲ್ಲಿ ಇರುವುದು ಹೈಡ್ರಾಲಿಕ್ ಪವರ್ ಬ್ರೇಕ್‌ಗಳು. ವೇಗದ ಚಾಲನೆಯಲ್ಲಿದ್ದಾಗ, ದಿಢೀರ್ ಎಂದು ಬ್ರೇಕ್ ಒತ್ತಿದಾಗ ನಾವು ಬ್ರೇಕ್ ಪೆಡಲ್ ಮೇಲೆ ಹಾಕುವ ಒತ್ತಡ ಸಾಲದೇ ಹೋಗಬಹುದು. ಕಾರಿನ ಬ್ರೇಕ್ ಪ್ರಬಲವಾಗಿದ್ದರೂ ಅದನ್ನು ಬಳಸದೇ ನಾವು ಬಿಡಬಹುದು. ಹೀಗಿದ್ದಾಗ ತುರ್ತು ಸಂದರ್ಭಗಳಲ್ಲಿ ಕಾರು ಸುರಕ್ಷಿತ ಅಂತರದಲ್ಲಿ ನಿಲ್ಲದೇ ಇರಬಹುದು. ಅದು ಅಪಘಾತಕ್ಕೂ ಕಾರಣವಾಗಬಹುದು. ಈ ಸಮಸ್ಯೆಯನ್ನು ಬ್ರೇಕ್ ಅಸಿಸ್ಟ್ ನಿವಾರಿಸುತ್ತದೆ. ಬ್ರೇಕ್ ಪೆಡಲ್ ಮೇಲೆ ನಾವು ಹಾಕುವ ಒತ್ತಡವನ್ನು ಲೆಕ್ಕ ಹಾಕಿ, ಆ ಒತ್ತಡ ಕಡಿಮೆ ಇದ್ದಲ್ಲಿ ಪೂರ್ಣ ಪ್ರಮಾಣದಲ್ಲಿ ಬ್ರೇಕ್ ಅಪ್ಲೈ ಆಗುವಂತೆ ಬ್ರೇಕ್ ಅಸಿಸ್ಟ್ ಮಾಡುತ್ತದೆ. ಬಹುತೇಕ ಸಂದರ್ಭಗಳಲ್ಲಿ ಅಪಘಾತಗಳನ್ನು ತಪ್ಪಿಸಲು ಇದು ನೆರವಾಗುತ್ತದೆ.

ಪಾರ್ಕಿಂಗ್ ಅಸಿಸ್ಟ್: ಇಕ್ಕಟ್ಟಾದ ಜಾಗಗಳಲ್ಲಿ ಸುರಕ್ಷಿತವಾಗಿ ಕಾರನ್ನು ಪಾರ್ಕ್ ಮಾಡುವಲ್ಲಿ ಇದು ನೆರವಾಗುತ್ತದೆ. ಇಲ್ಲಿ ಕಾರು ತನ್ನ ಸ್ಟೀರಿಂಗ್ ಮತ್ತು ಬ್ರೇಕ್ ಅನ್ನು ಮಾತ್ರ ನಿಯಂತ್ರಿಸುತ್ತದೆ. ಆದರೆ ಥ್ರೋಟಲ್, ಗಿಯರ್ ಬದಲಾವಣೆಯನ್ನು ಚಾಲಕನೇ ಮಾಡಬೇಕಾಗುತ್ತದೆ. ಸ್ಟೀರ್ ಮಾಡುವುದು ತನ್ನಿಂದ ಸಾಧ್ಯವೇ ಇಲ್ಲದಿದ್ದಾಗ, ಚಾಲಕನೇ ಆ ಕೆಲಸ ಮಾಡುವಂತೆ ಕಾರು

